ವನ್ನು ಅರಮನೆಗೆ ತರಲಾಯಿತು. ಸರಸ್ವತಿಯ ಶಕ್ತಿಯಿಂದ ಶತ್ರುಗಳು ಅರಮನೆಯನ್ನು ಪ್ರವೇಶಿಸಲು ಶಕ್ತರಾಗಲಿಲ್ಲ. ಸಿಂಧುರಾಜನ ಕಡೆಯವರು ವಿಜಯಘೋಷವನ್ನು ಮಾಡಿದರು. ಹೊಸ ಆಡಳಿತ ಅಧಿಕಾರಕ್ಕೆ ಬಂತು. ಕೂಡಲೇ ಸೇನಾಡಳಿತವನ್ನು ಘೋಷಿಸ ಲಾಯಿತು.

ಸರಸ್ವತಿಯಿಂದ ವರ ಪಡೆದಿದ್ದ ಎರಡನೆಯ ಲೀಲೆಯು ತನ್ನ ಮಗಳೊಡನೆ ದಿವ್ಯಶರೀರವನ್ನು ಹೊಂದಿ ಹತ್ತಾರು ಲೋಕಗಳನ್ನು ಸುತ್ತಿ, ಕಡೆಗೆ ರಾಜ ಪದ್ಮನ ಶರೀರವಿದ್ದ ಕಡೆಗೆ ಬಂದಳು. (ಪದ್ಮನು ಮೊದಲ ಲೀಲೆಯ ಗಂಡ. ಅವನೇ ವಿದೂರಥನಾಗಿ ಹುಟ್ಟಿದ್ದನು) ಅವನ ಶರೀರವನ್ನು ಹೂವುಗಳಿಂದ ಮುಚ್ಚಿ ಇನ್ನೂ ರಕ್ಷಿಸಿಡಲಾಗಿತ್ತು. ಯುದ್ಧರಂಗದಲ್ಲಿ ಸತ್ತ ತನ್ನ ಗಂಡ ಇವನೇ ಎಂದು ಅವಳು ಗುರುತಿಸಿ, ಅವನ ದೇಹಕ್ಕೆ ಚಾಮರದಿಂದ ಗಾಳಿ ಬೀಸಲು ಆರಂಭಿಸಿದಳು.

ಲೀಲೆ ಮತ್ತು ಸರಸ್ವತಿ ತಾವು ಎಲ್ಲಿಂದ ಪ್ರಯಾಣ ಆರಂಭಿಸಿದ್ದರೋ, ಆ ಅರಮನೆಗೆ ತಮ್ಮ ದಿವ್ಯಶರೀರದ ರೂಪದಲ್ಲಿ ಮತ್ತೆ ಪ್ರವೇಶಿಸಿದರು. ಲೀಲೆಯ ಭೌತಿಕ ದೇಹ, ಪದ್ಮನ ದೇಹವನ್ನು ಎಲ್ಲಿ ಇರಿಸಲಾಗಿತ್ತೋ ಅಲ್ಲಿಯೇ ಇತ್ತು. ಅವಳ ಸೂಕ್ಷ್ಮಶರೀರ ಮಾತ್ರ ಸರಸ್ವತಿಯೊಡನೆ ಲೋಕಾತಿಲೋಕಗಳನ್ನು ಸುತ್ತಿ ಬಂದಿತ್ತು. ಎರಡನೆಯ ಲೀಲೆಯು ಪದ್ಮನ ದೇಹಕ್ಕೆ ಗಾಳಿ ಬೀಸುತ್ತಿರುವುದನ್ನು ಮೊದಲನೆಯ ಲೀಲೆಯು ಕಂಡಳು. ಈಗ ಇನ್ನೊಂದು ಅಚ್ಚರಿಯ ಸಂಗತಿ ನಡೆಯಿತು. ವಿದೂರಥನ ಜೀವವು ಪದ್ಮನ ದೇಹವನ್ನು ಪ್ರವೇಶಿಸಲು ಪ್ರಯತ್ನಿಸುತ್ತಿತ್ತು. (ಪದ್ಮನೇ ವಿದೂರಥನಾಗಿ ಹುಟ್ಟಿ ಮತ್ತೆ ಸತ್ತಿದ್ದನೆಂದು ನೆನಪಿಡಬೇಕು). ಒಬ್ಬ ಪ್ರಯಾಣಿಕನು ಹಲವಾರು ದೇಶಗಳನ್ನು ಸುತ್ತಿ ಮತ್ತೆ ತನ್ನ ಸ್ವಗೃಹವನ್ನು ಪ್ರವೇಶಿಸಿದಂತಿತ್ತು ಆ ದೃಶ್ಯ. ಇವರಿಬ್ಬರನ್ನು ಕಂಡ ಎರಡನೆಯ ಲೀಲೆಯು ಸರಸ್ವತಿಯ ಪಾದಗಳಿಗೆ ನಮಸ್ಕರಿಸಿದಳು.

**ಸರಸ್ವತಿ:** ''ನೀನು ಇಲ್ಲಿಗೆ ಹೇಗೆ ಬಂದೆ, ಹೇಳು.''

**ಎರಡನೆಯ ಲೀಲಾ:** ''ವಿದೂರಥನ ಅರಮನೆಯಲ್ಲಿ ನನಗೆ ಪ್ರಜ್ಞೆ ತಪ್ಪಿತು. ನನ್ನ ಸೂಕ್ಷ್ಮಶರೀರ ಆಕಾಶದತ್ತ ಪಯಣಿಸಿತು. ಒಂದು ದಿವ್ಯವಾಹನ ನನ್ನನ್ನು ಇಲ್ಲಿಗೆ ಹೊತ್ತುತಂದಿತು. ವಿದೂರಥನು (ನಿಜವಾಗಿಯೂ ಅವನು ಪದ್ಮ) ಇಲ್ಲಿ ಹೂವುಗಳ ರಾಶಿಯ ಮಧ್ಯೆ ಮಲಗಿರುವುದನ್ನು ನಾನು ಕಂಡೆ. ಯುದ್ಧ ಮಾಡಿ ನಿತ್ರಾಣನಾಗಿದ್ದಾನೆಂದು ಎಳಿಸದೆ, ಅವನಿಗೆ ಗಾಳಿ ಬೀಸಲು ಆರಂಭಿಸಿದೆ.''

ಸರಸ್ವತಿಯ ಕೃಪೆಯಿಂದ ವಿದೂರಥನ ಜೀವವು ಪದ್ಮನ ದೇಹವನ್ನು ಪ್ರವೇಶಿಸಿತು. ನಿದ್ರೆಯಿಂದ ಎದ್ದವನಂತೆ ರಾಜ ಎದ್ದು ಕುಳಿತ. ಇಬ್ಬರು ಲೀಲೆಯರೂ ಅವನಿಗೆ ನಮಸ್ಕರಿಸಿದರು. ಮೊದಲನೆಯ ಲೀಲೆಯನ್ನು ಕುರಿತು ರಾಜನು ನೀನು ಯಾರೆಂದು ಪ್ರಶ್ನಿಸಿದನು.

**ಮೊದಲನೆಯ ಲೀಲೆ ಹೀಗೆಂದಳು:** ''ಪ್ರಭೂ, ನಿಮ್ಮ ಪೂರ್ವಜನ್ಮದ ಪತ್ನಿ ನಾನು. ನಿಮ್ಮ ನಿರಂತರ ಸಂಗಾತಿ ನಾನು. ನಾವಿಬ್ಬರೂ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಇದ್ದವರಲ್ಲ. ಈ ಎರಡನೆಯ ಲೀಲೆಯು ನಿಮ್ಮ ಈ ಜನ್ಮದ ಹೆಂಡತಿ. ಅವಳು ನನ್ನ ಪ್ರತಿಫಲನವಿದ್ದಂತೆ, ನನ್ನ ನೆರಳು ಇದ್ದಂತೆ. ನನಗೆ ಅನುಗ್ರಹ ಮಾಡಿದಂತೆ, ಸರಸ್ವತಿ ದೇವಿಯು ಇವಳಿಗೂ ಅನುಗ್ರಹ ಮಾಡಿದ್ದಾಳೆ. ಅವಳೂ ಇಲ್ಲಿ ಇರುವುದು ನಮ್ಮ ಮಹಾಭಾಗ್ಯ.''

ಇದನ್ನು ಕೇಳಿ ರಾಜನು ಎದ್ದು ನಿಂತು ಸರಸ್ವತಿಗೆ ಪ್ರಣಾಮ ಮಾಡಿದನು. ಸರಸ್ವತಿ ಅವನನ್ನು ಅನುಗ್ರಹಿಸಿ ಅದೃಶ್ಯಳಾದಳು. ರಾಜ ಮತ್ತು ಅವನ ರಾಣಿ ಮತ್ತೆ ಒಂದಾದರು. ರಾಜನ ಕಳೇಬರವನ್ನು ಕಾಯುತ್ತಿದ್ದ ರಾಜಸೇವಕರು ಎಚ್ಚೆತ್ತು, ರಾಜನಿಗೆ ಮತ್ತೆ ಜೀವ ಬಂದಿರುವುದನ್ನು ಕಂಡು ಆನಂದಪಟ್ಟರು.

ರಾಜ್ಯದೆಲ್ಲೆಡೆ ಜನರು ಸಂತೋಷಪಟ್ಟರು. ರಾಣಿ ಲೀಲೆಯ ಅದ್ಭುತ ಸಾಹಸವನ್ನು ಕೊಂಡಾಡಿದರು. ಲೀಲೆಯರ ವೃತ್ತಾಂತವನ್ನು ಕೇಳಿ ಅಚ್ಚರಿಪಟ್ಟರು. ಈ ಒಂದು ತಿಂಗಳಿನಲ್ಲಿ ನಡೆದ ವೃತ್ತಾಂತವನ್ನು ರಾಜನು ರಾಣಿಯಿಂದ ಕೇಳಿ ವಿಸ್ಮಯಹೊಂದಿದನು. ಸರಸ್ವತಿಯ ಅನುಗ್ರಹದಿಂದ ಮೂರು ಲೋಕಗಳ ಮೇಲೆ ಆಧಿಪತ್ಯವನ್ನು ಪಡೆದು ದೀರ್ಘಕಾಲ ರಾಜ್ಯಭಾರ ಮಾಡಿದನು.

ರಾಮನಿಗೆ ಈ ಸುದೀರ್ಘವಾದ ಕಥೆಯನ್ನು ಹೇಳಿದ ವಸಿಷ್ಠರು ಇದರ ಮಹತ್ವವನ್ನು ಕುರಿತು ಹೀಗೆಂದರು: ''ರಾಮ, ಲೀಲೆಯ ಕಥೆಯನ್ನು ವಿಸ್ತಾರವಾಗಿ ನಿನಗೆ ಹೇಳಿದ್ದೇನೆ. ಈ ಕಥೆಯನ್ನು ಮನನ ಮಾಡುವುದರಿಂದ ದೃಶ್ಯವಸ್ತುಗಳು ಸತ್ಯವೆಂಬ ಭ್ರಮೆಯು ನಿಧಾನವಾಗಿಯಾದರೂ ಕಳೆದುಹೋಗುತ್ತದೆ. ನಾವು ಕಣ್ಣಿನಿಂದ ನೋಡುವ ಈ ಭೂಮಿ ಮುಂತಾದವು ಅನಂತ ಚೈತನ್ಯದ ಅಭಿವ್ಯಕ್ತಿಗಳಲ್ಲದೆ ಬೇರೆಯಲ್ಲ ಎಂಬ ಬೋಧೆ ಉಂಟಾಗುತ್ತದೆ. ಯಾವುದೂ ನಿಜವಾಗಿ ಯಾವತ್ತೂ ಸೃಷ್ಟಿಯಾಗಿಯೇ ಇಲ್ಲ; ನಾವು ಕಾಣುವುದೆಲ್ಲವೂ ಮಾಯೆಯ ಹಂದರವಲ್ಲದೆ ಇನ್ನೇನೂ ಅಲ್ಲ ಎಂಬ ಅರಿವು ಮೂಡುತ್ತದೆ.''


ರಾಮನು ತಾನು ಧನ್ಯನೆಂದು ಭಾವಿಸಿದನು. ರಾಜನ ಇಡೀ ಜೀವಿತದ ಕಾಲವು ಒಂದು ತಿಂಗಳಷ್ಟು ಅಲ್ಪ ಅವಧಿಯಲ್ಲಿ ಕಳೆದುಹೋಯಿತೆಂಬ ಕಾಲದ ರಹಸ್ಯವನ್ನು ಕಂಡು ವಿಸ್ಮಯ ಹೊಂದಿದನು. ಅದರ ಬಗ್ಗೆ ವಸಿಷ್ಠರು ಹೀಗೆ ಹೇಳಿದರು: ''ರಾಮ, ಕಾಲವೆಂಬುದು ಕೂಡ ನಮ್ಮ ಮನಸ್ಸಿನ ಸೃಷ್ಟಿ ತಾನೇ. ಹೀಗಾಗಿ ಕಾಲದ ಅನುಭವವೆನ್ನುವುದು ಸಾಪೇಕ್ಷವೇ ಹೊರತು ನಿರಪೇಕ್ಷವಲ್ಲ. ದುಃಖದಲ್ಲಿ ಇರುವವನಿಗೆ ಪ್ರತಿಯೊಂದು ಕ್ಷಣವೂ ಯುಗವೆಂಬಂತೆ ಭಾಸ ವಾಗುವುದು. ಸುಖದಲ್ಲಿ ಮುಳುಗಿರುವವನಿಗೆ ಯುಗವೂ ಕೂಡ ಕ್ಷಣವೆಂಬಂತೆ ಭಾಸವಾಗುವುದು. ಹಾಗೆಯೇ ಸ್ವಪ್ನದ ಕಾಲಾವಧಿ ಜಾಗ್ರದವಸ್ಥೆಯ ಕಾಲಮಾಪನಕ್ಕಿಂತ ಭಿನ್ನವಾದುದು ಎಂದು ನಿನಗೇ ಗೊತ್ತಿದೆಯಲ್ಲವೆ?''

ರಾಮನಿಗೆ ಈ ಜಗತ್ತು, ಅದರ ಸೃಷ್ಟಿಯ ನಿಜವಾದ ಸ್ವರೂಪವು ತಿಳಿದುಬಂತು. ಜಗತ್ತಿನ ಎಲ್ಲ ಅನುಭವಗಳೂ ಭ್ರಮಾತ್ಮಕವಾದುದೆಂದು ಅರಿವಾಯಿತು. ಇದನ್ನೇ ನಾವು ಕೂಡ ಈ ಕಥೆಯಿಂದ ತಿಳಿದುಕೊಳ್ಳಬೇಕಾದದ್ದು.


# ಕಾಳಿದಾಸ ಮತ್ತು ಭೋಜರಾಜ

ಕಥೆ: ಆರ್.ರೇವತಿ
ಚಿತ್ರ : ಕೋವಿ


**1** ತಾರಾಪುರದ ಅರಸನಾದ ಭೋಜರಾಜ ಮತ್ತು ಕವಿ ಕಾಳಿದಾಸ ಇಬ್ಬರೂ ಸ್ನೇಹಿತರಾಗಿದ್ದರು.





**2** ಕಾಳಿದಾಸನ ಹೃದಯ ಅನುಕಂಪದಿಂದ ತುಂಬಿತ್ತು. ಒಂದು ಸಲ ಒಬ್ಬ ಬಡ ಕವಿ ಕಾಳಿದಾಸನನ್ನು ಭೇಟಿಯಾದ.






**3** ಆತನ ಶ್ಲೋಕವನ್ನು ಕೇಳಿ ಭೋಜರಾಜ ಸಂತುಷ್ಟನಾದ. ಆದರೆ ಅದರ ಕೊನೆಯ ಭಾಗ ಕಾಳಿದಾಸನದೆಂದು ಅವನಿಗೆ ಗೊತ್ತಾಗಿಹೋಯಿತು.





4
ಅದು ನಿನ್ನ ಶ್ಲೋಕವೆಂದು ನನಗೆ ಹೇಗೆ ತಿಳಿಯಿತು ಗೊತ್ತೆ? ನಿನ್ನ ಕಾವ್ಯಗಳಲ್ಲಿ ಬರುವ ಉಪಮೆಗಳನ್ನು ಓದಿದರೆ ಸಾಕು, ಅದು ನಿನ್ನದೆಂದೇ ಗೊತ್ತಾಗಿಬಿಡುವುದು. ನಿನ್ನ ಯಾವುದೇ ಕಾವ್ಯವನ್ನು ಓದಿದರೂ ಅದು ನನಗೆ ತಿಳಿಯುತ್ತದೆ.
ನಿನ್ನಂಥ ರಾಜನಿದ್ದರೆ ಸಾವಿರಾರು ಮಂದಿ ಕಾಳಿದಾಸರು ಬಂದೇ ಬರುವರು.
5
ಅದು ನನ್ನ ಶ್ಲೋಕವೆಂದು ಗೊತ್ತಿದ್ದರೂ ನೀನು ಆ ಕವಿಯನ್ನು ಸನ್ಮಾನಿಸಿದೆ. ನಿನ್ನನ್ನು ಹೇಗೆ ನಾನು ಅಭಿನಂದಿಸಲಿ?
6
ಕಾಳಿದಾಸ, ನನ್ನದೊಂದು ಆಸೆಯಿದೆ. ನೀನು ಅದನ್ನು ಪೂರೈಸುವೆಯಾ?
ಖಂಡಿತ, ಮಹಾರಾಜ!
ನನ್ನ ನಿಧನದ ಬಳಿಕ ನೀನು ನನ್ನ ಮೇಲೆ ಎಂತಹ ಚರಮ ಗೀತೆಯನ್ನು ರಚಿಸುವೆ ಎಂದು ತಿಳಿಯಲು ನನಗೆ ಕುತೂಹಲ ವುಂಟಾಗಿದೆ. ನೀನು ಈಗಲೇ ಆ ಚರಮಗೀತೆಯನ್ನು ರಚಿಸು. ಅದನ್ನು ಕೇಳಿ ನಾನು ಆನಂದಿಸುತ್ತೇನೆ.
7
ಇದೇನು ಕೇಳುತ್ತಿರುವೆ ಮಹಾರಾಜ!! ಬದುಕಿರುವವರ ಮೇಲೆ ನಾನೆಂದಿಗೂ ಚರಮಗೀತೆ ಬರೆಯಲಾರೆ. ನನ್ನ ನಾಲಿಗೆಯಲ್ಲಿ ಕಾಳೀಮಾತೆ ನೆಲೆಸಿದ್ದಾಳೆ. ನಾನೇನು ರಚಿಸಿ ಹಾಡುತ್ತೇನೋ ಅದು ನಿಜವಾಗಿಬಿಡುವುದು.
8
ನಿನ್ನ ಸುಂದರವಾದ ಉಪಮೆಗಳಿಂದ ಕೂಡಿದ ಕಾವ್ಯವನ್ನು ಕೇಳುತ್ತಾ ನಾನು ಸಾವಿರ ಸಲ ಬೇಕಾದರೂ ಸಾಯಬಲ್ಲೆ. ದಯವಿಟ್ಟು ಹಾಡು.
ನೀನೇನು ಬಯಸಿದೆಯೋ ಅದನ್ನು ನಾನು ನೀಡಲಾರೆ, ಮಹಾರಾಜ!
9
ರಾಜ ಕೋಪಗೊಂಡ.
ಇದು ರಾಜಾಜ್ಞೆ! ನನ್ನ ಆಜ್ಞೆಯನ್ನು ಮೀರಿದ ನಿನ್ನನ್ನು ನಾನು ಗಡೀಪಾರು ಮಾಡುತ್ತೇನೆ.
ಆಗಲಿ. ನಿನ್ನ ಚರಮಗೀತೆಯನ್ನು ಹಾಡುವುದಕ್ಕಿಂತ ಅದೇ ಉತ್ತಮ. ರಾಜನಿಗಾದರೋ ಈ ರಾಜ್ಯ ಮಾತ್ರ ತನ್ನದು. ಕವಿಗಾದರೋ, ಇಡೀ ಜಗತ್ತೇ ತನ್ನದು.


10
ಕಾಳಿದಾಸ ದೇಶ ಬಿಟ್ಟು ಹೊರಟ.
ಅವನು ಸಂನ್ಯಾಸಿಯಾದ.
ಅರಮನೆಯ ವೈಭವದ ಜೀವನದಲ್ಲಿ ಸುಖವಿದ್ದರೆ, ಬಡತನದ ಈ ಜೀವನವನ್ನೂ ಅದೇ ರೀತಿ, ಸಮಾನವಾಗಿ ಪರಿಗಣಿಸಬೇಕು. ಇದು ಸ್ನೇಹದ ಪ್ರತಿಫಲ. ಎಂಥ ಅವಸ್ಥೆಯೇ ಬರಲಿ, ನಾನು ಮಾತ್ರ ಬದುಕಿರುವವರ ಮೇಲೆ ಚರಮಗೀತೆ ಬರೆಯಲಾರೆ.


11
ಅರಮನೆಯಲ್ಲಿ ಭೋಜರಾಜನಿಗೆ ಅತ್ಯಂತ
ದುಃಖವಾಯಿತು.
ಕಾಳಿದಾಸ! ನಿನ್ನ ಅಗಲಿಕೆ ನನ್ನನ್ನು ಕಾಡುತ್ತಿದೆ. ನಿನ್ನ ಕಾವ್ಯವನ್ನು ಕೇಳದೆ ದಿನಗಳು ಉರುಳುತ್ತಿವೆ. ನಿನ್ನನ್ನು ಎಲ್ಲಿ ಹುಡುಕಲಿ? ವೇಷ ಮರೆಸಿ ನಿನ್ನನ್ನು ನಾನು ಹುಡುಕುತ್ತೇನೆ. ಎಲ್ಲದರೂ ಸರಿ, ಹೇಗೋ ನಿನ್ನನ್ನು ಹುಡುಕುತ್ತೇನೆ.


12
ಅಲ್ಲಿ ನಿಂತಿರುವ ಸಂನ್ಯಾಸಿ ಕಾಳಿದಾಸನೇ ಇರಬೇಕೆಂದು ನನ್ನ ಒಳ ಮನಸ್ಸು ನುಡಿಯುತ್ತಿದೆ. ಆಹ, ಅವನು ನನ್ನತ್ತ ಬರುತ್ತಿದ್ದಾನೆ.
ಓ, ಅಲೆಮಾರಿ! ಊರಿಂದೂರಿಗೆ ನೀನು ಅಲೆಯುತ್ತಿರುವೆ. ನೀನು ಹೋದ ದೇಶಗಳಲ್ಲೆಲ್ಲ ಏನಾದರೂ ಮುಖ್ಯವಾದ ವಾರ್ತೆಯನ್ನು ಕೇಳಿದ್ದೀಯಾ?


13
ಕಾಳಿದಾಸ ನನ್ನನ್ನು ಗುರುತಿಸಲಿಲ್ಲ.
ನನಗೆ ಇದು ಒಳ್ಳೆಯ ಅವಕಾಶ.
ಹೌದು, ಸ್ವಾಮಿಗಳೆ. ತಾರಾಪುರದ ರಾಜ ಭೋಜರಾಜ ಆರು ದಿನಗಳ ಹಿಂದೆ ತೀರಿಕೊಂಡ.
ಅಯ್ಯೋ ದೇವರೆ! ನನ್ನ ಜೀವದ ಗೆಳೆಯ ಭೋಜರಾಜ ತೀರಿಕೊಂಡನೆ? ಅವನು ಬದುಕಿದ್ದಾಗ ಅವನ ಮೇಲೆ ನಾನು ಚರಮಗೀತೆ ರಚಿಸಬೇಕೆಂದು ಬಯಸಿದ್ದ. ಆದರೆ ನಾನು ಅದಕ್ಕೆ ಒಪ್ಪಲಿಲ್ಲ. ಈಗ ನಾನು ಅದನ್ನು ಹಾಡುತ್ತೇನೆ.